**PW-1**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ, ಮಡಿಕೇರಿ-ಕೊಡಗು**

**ಎಂ.ವಿ.ಸಿ ಸಂಖ್ಯೆ: 122/2023**

**ಸಾಕ್ಷಿಯನ್ನು ದಿನಾಂಕ 12-12-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯವಿಚಾರಣೆ: ಅರ್ಜಿದಾರರ ಪರ ಶ್ರೀ. ಡಿ.ಎನ್.ಡಿ. ವಕೀಲರಿಂದಃ**

ನಾನು ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರಿಕೆ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ.

| | | |
|---|---|---|
| Certified copy of the FIR | ನಿಪಿ-1 | ಎಂದು ಗುರುತಿಸಲಾಯಿತು. |
| Certified copy of the Complaint | ನಿಪಿ-2 | ಎಂದು ಗುರುತಿಸಲಾಯಿತು. |
| Certified copy of the charge sheet | ನಿಪಿ-3 | ಎಂದು ಗುರುತಿಸಲಾಯಿತು. |
| Certified copy of the spot mahazar | ನಿಪಿ-4 | ಎಂದು ಗುರುತಿಸಲಾಯಿತು. |
| Certified copy of the Motor Vehicle Accident report. | ನಿಪಿ-5 | ಎಂದು ಗುರುತಿಸಲಾಯಿತು. |
| Certified copy of the complaint | ನಿಪಿ-6 | ಎಂದು ಗುರುತಿಸಲಾಯಿತು. |
| Certified copy of the wound certificate | ನಿಪಿ-7 | ಎಂದು ಗುರುತಿಸಲಾಯಿತು. |
| Tax invoice issued by the Mandavi motors | ನಿಪಿ-8 | ಎಂದು ಗುರುತಿಸಲಾಯಿತು. |
| Tax invoice | ನಿಪಿ-9 | ಎಂದು ಗುರುತಿಸಲಾಯಿತು. |
| Certified copy of the order sheet in CC No.641/2023 | ನಿಪಿ-10 | ಎಂದು ಗುರುತಿಸಲಾಯಿತು. |

ಪಾಟೀಸವಾಲಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.

**ಸಾಕ್ಷಿಯನ್ನು ದಿನಾಂಕ 21-02-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀಸವಾಲು-3 ನೇ ಎದುರುದಾರರ ಪರ ಶ್ರೀ ಬಿ.ಎಸ್.ಎಲ್ ವಕೀಲರಿಂದಃ</u>**

ನನ್ನ ಕಾರ್ ನಂಬರ್ KA-51-MC-7168. ನಾನು ಸದರಿ ಕಾರಿನ ಮಾಲೀಕ ಎಂದು ತೋರಿಸಲು ನಾನು R.C ಯನ್ನು ಹಾಜರು ಮಾಡಿದ್ದೇನೆ. ಸಾಕ್ಷಿಗೆ ನ್ಯಾಯಾಲಯದ ಎದುರು ಇರುವ ಕಡತವನ್ನು ತೋರಿಸಲಾಗಿ ಅದರಲ್ಲಿ ಯಾವುದೇ ದಾಖಲೆ ಇಲ್ಲ ಎಂದು ನುಡಿದಿರುತ್ತಾರೆ. ಅದು 2011 ರ ಮಾಡೆಲ್ ನ ಕಾರ್ ಆಗಿತ್ತು. ನಾನು ಮಾರುತಿ ಇನ್ಸೂರೆನ್ಸ ಕಂಪನಿಯಲ್ಲಿ ಪಾಲಿಸಿ ತೆಗೆದುಕೊಂಡಿದ್ದೇನೆ. ಅಪಘಾತ ಆಗುವ ಸಂದರ್ಭದಲ್ಲಿ ನನ್ನ ಕಾರಿಗೆ ಎಷ್ಟು ಬೆಲೆ ಬಾಳುತ್ತದೆ ಎಂದು ಇನ್ಸೂರೆನ್ಸ ಕಂಪನಿಗೆ ಮಾಹಿತಿ ಕೊಟ್ಟು ಪಾಲಿಸಿ ತೆಗೆದುಕೊಂಡಿದ್ದೇನೆ ಎಂದರೆ ಸಾಕ್ಷಿ ನಿಖರವಾದ ಬೆಲೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತ ಆದ ನಂತರ ನಾನು ನನ್ನ ಇನ್ಸೂರೆನ್ಸ ಕಂಪನಿಗೆ ಮಾಹಿತಿ ನೀಡಿದ್ದೆ. ನಾನು ಮಾಹಿತಿ ನೀಡಿದ ನಂತರ ಇನ್ಸೂರೆನ್ಸ ಕಂಪನಿಯವರು ಸರ್ವೆ ಮಾಡಲು ಒಬ್ಬ ವ್ಯಕ್ತಿಯನ್ನು ಕಳುಹಿಸಿದ್ದರು ಎಂದರೆ ಸರಿ. ಸದರಿ ವ್ಯಕ್ತಿ ವಾಹನಕ್ಕೆ ಎಷ್ಟು ಜಖಂ ಆಗಿದೆ ಎಂದು ಇನ್ಸೂರೆನ್ಸ ಕಂಪನಿಗೆ ತಿಳಿಸಿದ್ದಾರೆ ಎಂದರೆ ಸರಿ. ಸದರಿ ಮಾಹಿತಿಯ ಮೇಲೆ ನನ್ನ ಕಾರನ್ನು ರಿಪೇರಿ ಮಾಡಿದ್ದಾರೆ ಎಂದರೆ ಸರಿ. ಸದರಿ ರಿಪೇರಿಯ ಖರ್ಚನ್ನು ನನ್ನ ಇನ್ಸೂರೆನ್ಸ ಕಂಪನಿಯವರು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ನಾನು ನೀಡಿದ್ದೇನ ೆಎಂದು ನುಡಿಯುತ್ತಾರೆ. ನನ್ನ ಇನ್ಸೂರೆನ್ಸ ಕಂಪನಿಯವರು 40 ಶೇಡಕದಷ್ಟು ಹಣವನ್ನು ಕೊಟ್ಟಿದ್ದಾರೆ. ಇನ್ಸೂರೆನ್ಸ ಕಂಪನಿಯವರು ಹಣ ಪಾವತಿ ಮಾಡುವ ಸಂದರ್ಭದಲ್ಲಿ ಸಂಪೂರ್ಣ ಹಣ ಪಾವತಿ ಆಗಿದೆ ಎಂದು ನಾನು ವೋಚರ್ ಗೆ ಸಹಿ ಹಾಕಿ ನೀಡಿದ್ದೇನೆ. ನನ್ನ ಕಾರ್ ರಿಪೇರಿಯ ಸಂಪೂರ್ಣ ಹಣವನ್ನು ನಾನು ಪಡೆದುಕೊಂಡ ಕಾರಣ 3 ನೇ ಎದುರುದಾರರು ಯಾವುದೇ ಹಣವನ್ನು ಕೊಡಲು

ಬದ್ದರಲ್ಲ ಎಂದರೆ ಸರಿಯಲ್ಲ.

ನಿಪಿ-8 ರ ಒಂದು ಪ್ರತಿಯನ್ನು ನಾನು ಇನ್ಶೂರೆನ್ಸ ಕಂಪನಿಗೆ ನೀಡಿದ್ದೇನೆ. ನಾನು ಈಗಾಗಲೇ ಸಂಪೂರ್ಣ ಹಣವನ್ನು ಪಡೆದುಕೊಂಡ ಕಾರಣ ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಬಂದು ಪರಿಹಾರಕ್ಕಾಗಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ.

**5 ನೇ ಎದುರುದಾರರ ಪರ ವಕೀಲರು ಪಾಟೀಸವಾಲಿಗೆ ಕಾಲಾವಕಾಶ ಕೇಳಿದ್ದು, ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.

**ಸಾಕ್ಷಿಯನ್ನು ದಿನಾಂಕ 15-03-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಪಾಟೀಸವಾಲು-5 ನೇ ಎದುರುದಾರರ ಪರ ಶ್ರೀಮತಿ ಎ.ಬಿ ವಕೀಲರಿಂದಃ</u>**

ವಾಹನಗಳಿಗೆ insurance ಮಾಡುವ ಸಂದರ್ಭದಲ್ಲಿ insurance policy terms and conditions ಗಳನ್ನು ಒಳಗೊಂಡಿದೆ ಎಂದರೆ ಸರಿ. Insurance policy ಯಲ್ಲಿ ಜಖಂಗಳಿಗೆ ನಮಗೆ ಮತ್ತು terms and conditions ಗಳನ್ನು ಅನುಸರಿಸಿದರೆ ಮಾತ್ರ ನಮಗೆ ವಿಮಾ ಹಣ ಕೇಳಲು ಬರುತ್ತದೆ ಎಂದರೆ ಸರಿ. ವಾಹನಕ್ಕೆ ಅಪಘಾತ ಆದ ನಂತರ ನಾನು ನಮ್ಮ ಕಂಪನಿಯವರಿಗೆ ಮಾಹಿತಿ ತಿಳಿಸಿ ಅವರು ಬಂದು ಪರೀಕ್ಷೆ ಮಾಡಿ 1,06,984/- ರೂಪಾಯಿಗಳನ್ನು ಪೂರ್ಣ ನಷ್ಟ ಪರಿಹಾರವಾಗಿ ನನಗೆ

ಪಾವತಿ ಮಾಡಿದ್ದಾರೆ ಎಂದರೆ ಸಾಕ್ಷಿ ಅದರಲ್ಲಿ 70,000/- ರೂಪಾಯಿಗಳನ್ನು ಮಾತ್ರ ಶೋರೂಂ ಗೆ ಪಾವತಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿ 70,000/- ರೂಪಾಯಿಗಳನ್ನು ಶೋರೂಂ ಗೆ ಪಾವತಿ ಮಾಡಿದ್ದಾರೆ ಎಂದು ಹೇಳಲು ನಾನು ಬಿಲ್ಲನ್ನು ಹಾಜರು ಪಡಿಸಿದ್ದೇನೆ. 5 ನೇ ಪ್ರತಿವಾದಿಯಿಂದ ನಾನು ಸಂಪೂರ್ಣ ವಿಮಾ ಹಣ ಪಾವತಿ ಆಗಿದೆ ಎಂದು ನಾನು ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಆ ರೀತಿಯಾಗಿ 5 ನೇ ಪ್ರತಿವಾದಿಯಿಂದ ಸ್ವೀಕರಿಸಿದ ಹಣ ತೃಪ್ತಿಕರವಾಗಿರಲಿಲ್ಲ ಎಂದು ನಾನು ಹಣ ಪಡೆಯುವ ಸಂದರ್ಭದಲ್ಲಿ ನಾನು ತಕರಾರು ಮಾಡಿರಲಿಲ್ಲ ಮತ್ತು ಆ ಬಗ್ಗೆ ನಾನು ನೋಟಿಸ್ಸನ್ನು ಸಹ ನೀಡಿರಲಿಲ್ಲ. 5 ನೇ ಪ್ರತಿವಾದಿಯ ವಿರುದ್ಧ ನಾನು ಗ್ರಾಹಕ ನ್ಯಾಯಾಲಯಕ್ಕೆ ದೂರು ನೀಡಿರಲಿಲ್ಲ. 5 ನೇ ಪ್ರತಿವಾದಿ ನನ್ನ policy ಯ ಷರತ್ತಿನ ಪ್ರಕಾರ ನನಗೆ ಬರಬೇಕಾದ ಹಣವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದಾರೆ ಮತ್ತು ಆ ಕಾರಣ ನಾನು ಅವರ ಬಳಿ ಯಾವುದೇ ಹಣ ಕೇಳಲು ಹಕ್ಕಿಲ್ಲ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ನನಗೆ ಯಾವುದೇ ಹಣವನ್ನು ಪಾವತಿ ಮಾಡಲು ಬದ್ಧರಲ್ಲ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-xxx
1 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,
ಕೊಡಗು-ಮಡಿಕೇರಿ.